ಅಡಿಗೆಯವರ ಕೈಚಳಕವನ್ನು ಹೊಗಳುತ್ತಾ ಹೊಟ್ಟೆಯನ್ನು ನೀವಿಕೊಳ್ಳುತ್ತಿದ್ದರು. ಬಸವಳಿದು ಬಂದ ಇವನನ್ನು ನೋಡಿದ್ದೇ ಎಲ್ಲರ ಮುಖವೂ ಕಪ್ಪಾಗಿತ್ತು.

ಅಪ್ಪನ ಪ್ರಸಾದವೆಂದು ಇದ್ದ ಬದ್ದದರಲ್ಲೇ ಸ್ವಲ್ಪ ತಿಂದ ಶಾಸ್ತ್ರ ಮಾಡಿದವನನ್ನು ಯಾರೂ ಮುಖಕೊಟ್ಟು ಮಾತಾಡಿಸಿರಲೇ ಇಲ್ಲ. ತಾನು ಬಂದದ್ದೇ ತಪ್ಪಾಯ್ತೇನೋ ಎನ್ನಿಸಿದ ಅವ ಅಂದೇ ಸಂಜೆ ಮರಳಿ ಬಸ್ಸು ಹತ್ತಿದ್ದ. ಹಾಗೆ ಬಸ್ಸಿಗಾಗಿ ಕಾಯುತ್ತಿದ್ದವನನ್ನು ಮಧ್ಯಾಹ್ನ ಊಟಕ್ಕೆ ಬಂದ ಪರಿಚಯದವರೊಬ್ಬರು 'ಅಲ್ಲೋ ಮಾರಾಯ... ನೀನೊಂದು ಸ್ವಲ್ಪ ಸಹಾಯ ಮಾಡಿದ್ದರೆ ನಿನ್ನ ಅಣ್ಣಂದಿರು ಒಳ್ಳೇ ಟ್ರೀಟ್‌ಮೆಂಟ್ ಕೊಡಿಸಿ ನಿಮ್ಮಪ್ಪನನ್ನು ಇನ್ನೊಂದಿಷ್ಟು ದಿನ ಉಳಿಸಿಕೊಳ್ಳುತ್ತಿದ್ದರೋ ಏನೋ. ಹಣವೇ ಇಲ್ಲದ್ದರಿಂದ ಕೊನೆ ದಿನಗಳನ್ನು ಆ ಮನುಷ್ಯ ಪಾಪ ಮನೆಯಲ್ಲೇ ನರಳುತ್ತ ಕಳೆದ'. ಇವನಿಗೆ ತಲೆ ಧಿಮ್ಮೆಂದಿತ್ತು. ತಾನು ಕಳುಹಿಸಿದ ಹಣ... ಅದೂ ಹೆಂಡತಿ ಸಂಬಳವನ್ನು ಒತ್ತೆಯಿಟ್ಟು ಸಾಲ ಪಡೆದು ಕೊಟ್ಟ ಹಣ... ಎಲ್ಲ ಸೇರಿಸಿದರೆ ಕನಿಷ್ಠ ಐದಾರು ಲಕ್ಷವಾದರೂ ಆಗಿದ್ದೀತು. ಮನೆಗೆ ಹೋದವ ಬಾಯಿ ತಪ್ಪಿಯೂ ಹೆಂಡತಿಯೊಂದಿಗೆ ಈ ವಿಷಯವನ್ನು ಹೇಳಲಿಲ್ಲ. ಹಾಗೆಯೇ ಮನೆಯಲ್ಲಿ ತನ್ನನ್ನು ನಡೆಸಿಕೊಂಡ ರೀತಿಯ ಬಗ್ಗೆಯೂ.

*****

ಅಮ್ಮ ಸಾಯುವ ದಿನಗಳಲ್ಲಿ ಅದೃಷ್ಟವಶಾತ್ ಅವ ಪಕ್ಕದಲ್ಲಿಯೇ ಇದ್ದ. ಮೊದಲು ಕೆಲಸಕ್ಕೆ ಸೇರಿದ ಕಂಪೆನಿಯಲ್ಲೇ ಮುಂದುವರಿಯುತ್ತಿದ್ದರೂ ಹುದ್ದೆಯಲ್ಲಿ ತೀರ ಮೇಲೇರಿದ್ದರಿಂದ ಹತ್ತಿರದಲ್ಲಿಯೇ ಇದ್ದ ಪಟ್ಟಣದ ಹೊಸ ಶಾಖೆಯೊಂದನ್ನು ತೆರೆಯುವ ಸಾಧ್ಯತೆಯನ್ನು ಪರಿಶೀಲಿಸುವ ಸಲುವಾಗಿ ಬಂದವ ವಯಸ್ಸಾಗಿ ಕಾಯಿಲೆಯಿಂದ ಮಲಗಿದ್ದ ತಾಯಿಯನ್ನು ನೋಡಿಕೊಂಡು ಹೋಗಲು ಬಂದಿದ್ದ. ಎಲ್ಲರನ್ನೂ ಧಿಕ್ಕರಿಸಿ ಅಮ್ಮನ ಪಕ್ಕದಲ್ಲಿ ಕುಳಿತಿದ್ದ. ಆಗಲೇ ಹಾಸಿಗೆ ಹಿಡಿದು ನಶಿಸಿ ಹೋಗಿದ್ದ ತಾಯಿ ಇವನನ್ನು ನೋಡಿದವಳೇ ಬುಳು ಬುಳು ಅಳಲು ತೊಡಗಿದರೆ ಅಕ್ಕ ಪಕ್ಕದಲ್ಲಿಯೇ ಇದ್ದ ಅವರೆಲ್ಲ ಗದರಿದ್ದರು 'ಸಾಕು ನಿನ್ನ ವೇಷ... ನಾವೆಲ್ಲ ಇಷ್ಟು ದಿನ ಕಂಡದ್ದು ಏನೂ ಅಲ್ಲ ಇವಳಿಗೆ... ಇವನೊಬ್ಬ ಮಹಾ ದೊಡ್ಡ ಮನುಷ್ಯ. ನೋಡಿದಾಕ್ಷಣ ಅಳುವುದಕ್ಕೆ'. ಅವರೇನೇ ಹೇಳಿದರೂ ಇವ ಆಕೆಯ ಪಕ್ಕವನ್ನು ಬಿಟ್ಟು ಏಳಲಿಲ್ಲ. ಇವನದೇ ದುಡ್ಡಿನಲ್ಲಿ ತಾಯಿಯ ಆರೈಕೆ ನೋಡಲೆಂದು ನೇಮಿಸಿಕೊಂಡ ದಾದಿ ಅಲ್ಲೇ ಪಕ್ಕದಲ್ಲಿದ್ದವಳು 'ಅಮ್ಮ ಎಚ್ಚರಿರುವಾಗೆಲ್ಲ ನಿಮ್ಮ ಹೆಸರನ್ನೇ ಹೇಳುತ್ತಿದ್ದರು. ಎಲ್ಲರನ್ನೂ ಬೇಡಿಕೊಳ್ಳುತ್ತಿದ್ದರು. ಒಂದು ಬಾರಿ ಅವನನ್ನು ಕರೆಸಿ. ಅವನ ಜೊತೆಗೆ ಹೋಗುತ್ತೇನೆ. ದೊಡ್ಡ ದೊಡ್ಡ ಡಾಕ್ಟರುಗಳೆಲ್ಲ ಗುರುತು ಅವನಿಗೆ. ಹೇಗಾದರೂ ಗುಣಪಡಿಸಿಯಾನು...' ಎನ್ನುತ್ತ ಮುಂದುವರಿಸಿ ಇನ್ನೂ ಏನೋ ಹೇಳಲು ಹೊರಟ ಅವಳನ್ನು ಅಲ್ಲೇ ನಿಂತಿದ್ದ ಅಣ್ಣಂದಿರು ಕಣ್ಣು ಕೆಕ್ಕರಿಸಿ ನೋಡಿ ಬಾಯಿ ಮುಚ್ಚಿಸಿದ್ದರು.

ಅಮ್ಮ ಮಾತಾಡಲು ಚಡಪಡಿಸುವಂತೆ ಕಂಡರೂ ಆಗಲೇ ಅರ್ಧದಷ್ಟು ಬಿದ್ದು ಹೋಗಿದ್ದ ಜೀವಕ್ಕೆ ಏನೂ ಹೇಳಲು ಸಾಧ್ಯವಾಗಿರಲಿಲ್ಲ. ಆದರೆ ಅವಳ ಕ್ಷೀಣವಾದ ಕೈ ಇವನ ಕೈಯ್ಯನ್ನು ತಡವುತ್ತಿದ್ದುದು ಆ ದಾದಿ ಹೇಳದೆ ಬಿಟ್ಟದ್ದನ್ನು ಹೇಳಿತ್ತು. ಕಣ್ಣುಗಳಲ್ಲಿ ನೀರು ಒಂದೇ ಸಮನೆ ಹರಿಯುತ್ತಿತ್ತು. ಇವನು ಬರುವುದನ್ನೇ ಕಾಯುತ್ತಿದ್ದಳೋ ಎನ್ನುವಂತೆ ಅಂದೇ ಸಂಜೆ ಕೊನೆಯುಸಿರೆಳೆದಿದ್ದಳು.

ಅಲ್ಲಿಂದಲೇ ಕಂಪೆನಿಯ ಹೆಡ್ಡಾಫೀಸಿಗೊಂದು ತಾರು ಕಳಿಸಿ ಪರಿಸ್ಥಿತಿಯನ್ನು ವಿವರಿಸಿ ತನಗಿನ್ನು ಹದಿನೈದು ದಿನ ಬರಲಾಗುವುದಿಲ್ಲ ಎಂದು ತಿಳಿಸಿದ್ದ. ಹೆಂಡತಿಗೂ ಫೋನ್ ಮಾಡಿ ಸಾಧ್ಯವಾದರೆ